ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ. 50-2022
............................ ವಿರುದ್ಧ .............................

PW 02
CW 01

ಸಾಕ್ಷಿಯ ಹೆಸರು : **ಮಂಜುಳಾ ಎಸ್ ರಾವೂಜಿ**
ತಂದೆಯ ಹೆಸರು : ಸೋಮಪ್ಪ ರಾಮೋಜಿ
ವಯಸ್ಸು : 49 ವರ್ಷ
ಉದ್ಯೋಗ : **ಪೊಲೀಸ್** ಉಪ ನಿರೀಕ್ಷಕರು
ವಾಸ್ತವ್ಯ : **ಕಾರವಾರ.**

ದಿನಾಂಕಃ 27-02-2023 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನಾನು 05-03-2021 ರಿಂದ 27-04-2022 ರ ವರೆಗೆ ಜೋಯಿಡಾ ಠಾಣೆಯಲ್ಲಿ ಉಪ ನಿರೀಕ್ಷಕ ಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 08-06-2021 ರಂದು ಬೆಳಿಗ್ಗೆ 5-45 ಗ ಆರೋಪಿತರ ಪತ್ತೆಗೆ ಸಿಬ್ಬಂದಿಗಳಾದ ಚಾಸಾ 8 ರಿಂದ 11 ಹಾಗೂ 16 ರವರನ್ನು ಕರೆದುಕೊಂಡು ಕೆಲೋಲಿ ಗ್ರಾಮಕ್ಕೆ ಸರ್ಕಾರಿ ಜೀಪ್‌ನಲ್ಲಿ 6-30 ಗಂಟೆಗೆ ಹೋಗಿ ತಲುಪಿರುತ್ತೇವೆ. ಆಗ ಒಬ್ಬ ವ್ಯಕ್ತಿ ಕೆಲೋಲಿ ಗ್ರಾಮದಿಂದ ಕುಂದಲ್ ಗ್ರಾಮಕ್ಕೆ ಕಚ್ಚಾ ರಸ್ತೆಯಲ್ಲಿ ಬರುತ್ತಿದ್ದು, ಆಗ ಚಾಸ 9 ರವರು ಸದ್ರಿ ವ್ಯಕ್ತಿಯೇ ಆರೋಪಿಯೇ ಆಗಿರುತ್ತಾರೆ ಎಂದು ತಿಳಿಸಿರುತ್ತಾರೆ . ನಂತರ ಆತನನ್ನು ಹಿಡಿಯಲು ಪ್ರಯತ್ನಿಸಿದಾಗ, ಬೈಕ್ನು ಅಲ್ಲಿಯೇ ನಿಲ್ಲಿಸಿ ಕಾಡಿನಲ್ಲಿ ಓಡಿ ಹೋಗಿರುತ್ತಾರೆ . ನಂತರ ಬೈಕ ಇದ್ದ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಬೈಕ ಗೆ ಒಂದು ನಾಡ ಬಂದೂಕುನ್ನು ಕಟ್ಟಿರುವುದು ಕಂಡು ಬಂದಿರುತ್ತದೆ. ನಂತರ ಚಾಸಾ 9 ರವರನ್ನು ಇಬ್ಬರು ಪಂಚರನ್ನು ಕರೆತರುವಂತೆ ಬೆಳಿಗ್ಗೆ 7-15 ಗಂಟೆಯ ಸುಮಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ಬೆಳಿಗ್ಗೆ 7-55 ಕ್ಕೆ ಚಾಸಾ 9 ರವರು ಚಾಸಾ 2 ಮತ್ತು 3 ಪಂಚನರನ್ನು ತಂದ ಹಾಜರುಪಡಿಸಿರುತ್ತಾರೆ. ಅವರಿಗೆ

ಪಂಚರಾಗಿ ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಬೈಕ ಸಂಃ ಕೆಎ-30-ಎಲ್-7336 ನೇದ್ದನ್ನು ಹಾಗೂ ಒಂದು ನಾಡ ಬಂದೂಕು ಹಾಗೂ ಗಜಕಡ್ಡಿ, ಬಟ್ಟೆಯ ಸೀಲಿಂಗ್ ವಶಪಡಿಸಿಕೊಂಡು ಆ ಬಗ್ಗೆ ಸ್ಥಳದಲ್ಲಿ **ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ** ಬೆಳಿಗ್ಗೆ **07-50 ರಿಂದ 9-00 ರ ವರಗೆ ಪಂಚನಾಮೆಯನ್ನು ಜರುಗಿಸಿ,** ಕಚ್ಚಾ ನಕಾಶೆಯನ್ನು ಹಾಗೂ ಪೋಟೋವನ್ನು ತೆಗೆದಿರುತ್ತೇವೆ. **ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು** ಈಗಾಗಲೇ **ನಿಪಿ 1 ಎಂದು** ಗುರುತಿಸಲಾಗಿದ್ದು, **ಅದರಲ್ಲಿರುವ ನನ್ನ 2** ಸಹಿಗಳನ್ನು ಒಟ್ಟಾಗಿ **ನಿಪಿ 1** ಬಿ **ಎಂದು ಗುರುತಿಸಲಾಯಿತು.** ಕಚ್ಚಾನಕಾಶೆಯ**ಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು** ಈಗಾಗಲೇ **ನಿಪಿ 2** ಎಂದು ಗುರುತಿಸಲಾಗಿದ್ದು, **ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2** ಬಿ **ಎಂದು ಗುರುತಿಸಲಾಯಿತು.** ಒಂದು ಪೋಟೋವನ್ನು **ನೋಡಿ ಗುರುತಿಸಿದ್ದು,** ಅವುಗಳನ್ನು ಈಗಾಗಲೇ **ನಿಪಿ 3** ಎಂದು ಗುರುತಿಸಲಾಗಿದೆ. ನಂತರ ಠಾಣೆಗೆ ಹಿಂದಿರುಗಿ ಚಾಸಾ **22** ರವರಿಗೆ ದೂರ ನೀಡಿರುತ್ತೇವೆ. **ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು,** ದೂರನ್ನು ಈಗಾ **ನಿಪಿ 4 ಎಂದು** ಗುರುತಿಸಲಾಯಿತು. **ಅದರಲ್ಲಿರುವ ನನ್ನ** ಸಹಿಯನ್ನು **ನಿಪಿ 4** ಎ **ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ವಶಪಡಿಸಿಕೊಂಡ** ನಾಡಬಂದೂಕು, ಗಜಕಡ್ಡಿ ಹಾಗೂ ಸೀಲಿಂಗನ್ನು ಒಟ್ಟಾಗಿ **ಅವುಗಳನ್ನು ಮುಂ ಮಾ** 1 ಎಂದು ಗುರುತಿಸಲಾಯಿತು. ಹಾಗೂ ನಿಪಿ **3** ರಲ್ಲಿ ಇರುವ ಬೈಕ್‌ನ್ನು ನೋಡಿ ಗುರುತಿಸಿರುತ್ತೇನೆ. **ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.**

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ಎಸ್.ಎಸ್.ಕೆ ವಕೀಲರಿಂದ.

1. ಪೊಲೀಸ್ ಠಾಣೆಯಿಂದ ನ್ಯಾಯಾಲಯ ಸುಮಾರು 26 ಕಿಲೋ ಮೀಟರ್ ಪೂರ್ವ ದಿಕ್ಕಿನಲ್ಲಿ ದೂರದಲ್ಲಿದೆ. ಪೊಲೀಸ್ ಠಾಣೆಯಿಂದ ಘಟನಾಸ್ಥಳ ಉತ್ತರ ದಿಕ್ಕಿನಲ್ಲಿ 30 ಕಿಲೋ ಮೀಟರ್ ದೂರದಲ್ಲಿದೆ. ಪೊಲೀಸ್ ಠಾಣೆಯಿಂದ ಘಟನಾಸ್ಥಳಕ್ಕೆ ಜೋಯಿಡಾ, ಕುಂಬಾರವಾಡ, ಕುಂದಲ್ ಕ್ರಾಸ ನಿಂದ ಒಳಗೆ ಮಾರ್ಗವಾಗಿ ಹೋಗಿರುತ್ತೇವೆ. ಈ ಮುಂಚೆ ಆರೋಪಿಯ ಮೇಲೆ ಗುನ್ನಾ ಸಂಖ್ಯೆ: 29-2021 ಎಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಆರೋಪಿಯನ್ನು ದಸ್ತಗಿರಿ ಮಾಡಲು ನ್ಯಾಯಾಲಯದ ವಾರೆಂಟನ್ನು ಪಡೆದುಕೊಂಡಿರುವುದಿಲ್ಲ.

2. ಚಾಸಾ 9 ರವರು ಚಾಸಾ 2 ಮತ್ತು 3 ಪಂಚರವನ್ನು ಕುಂದಲ್ ಗ್ರಾಮದಿಂದ ಕರೆತಂದಿರುತ್ತಾರೆಂದು ತಿಳಿಸಿರುತ್ತಾರೆ. ಪಂಚರಿಗೆ ನೋಟಸ್‌ನ್ನು ಜಾರಿ ಮಾಡಿರುತ್ತೇವೆ. ಪಂಚನಾಮೆಯ ಬಳಿಕಾ ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನಿಪಿ 4 ದೂರನಲ್ಲಿ ಪಂಚರ ಹೆಸರನ್ನು ನಮೂದು ಮಾಡಿಲ್ಲ. ದೂರಿನೊಂದಿಗೆ ಪಂಚನಾಮೆಯನ್ನು ನೀಡಿರುವುದರಿಂದ ಅವರ ಹೆಸರನ್ನು ಅವರ ಹೆಸರು ನಮೂದು ಮಾಡಿರುವುದಿಲ್ಲ.

3. ಆರೋಪಿಯು ಓಡಿ ಹೋಗುವಾಗ ನಾನು ಜೀಪ್ನಲ್ಲಿದ್ದು, ಉಳಿದ ಸಿಬ್ಬಂದಿಯವರು ಕೆಳಗೆ ನಿಂತಿರುತ್ತಾರೆ. ಆರೋಪಿಯು ನಮ್ಮ ಜೀಪ್‌ನ್ನು ನೋಡಿ ಪೂರ್ವ ದಿಕ್ಕಿನ ಜಂಗಲ್‌ನಲ್ಲಿ ಓಡಿ ಹೋಗಿರುತ್ತಾರೆ.

ಆರೋಪಿಯು ಬೈಕ ನ್ನು ಕಚ್ಚಾ ರಸ್ತೆಯಲ್ಲಿ ಸ್ವಲ್ಪ ದೂರು ಹೋಗಿ ಗದ್ದೆಯಲ್ಲಿ ಬಿಳಿಸಿ ಓಡಿ ಹೋಗಿರುತ್ತಾನೆ. ಆರೋಪಿ ಹಿಮುಖವಾಗಿ ಓಡಿ ಹೋಗುವಾಗ ಅತನ ಮುಖ ಕಾಣಿಸುವುದಿಲ್ಲ ಎಂದರೆ ಓಡಿ ಹೋಗುವ ಮುನ್ನ ಆತನ ಮುಖವನ್ನು ನೋಡಿರುತ್ತೇವೆ. ಆರೋಪಿಯ ಮುಖವನ್ನು ಚಾಸಾ 9 ರವರು ನೋಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಆ ದಿನ ತಿಳಿ ನೀಲಿ ಬಣ್ಣದ ಬಟ್ಟೆಯನ್ನು ಧರಿಸಿದ್ದನು. ಯಾವ ಬಣ್ಣದ ಪ್ಯಾಂಟ್ನು ಧರಿಸಿದ್ದ ಎಂದು ನನಗೆ ನೆನಪಿಲ್ಲಾ.

4. ಘಟನಾಸ್ಥಳದಿಂದ ಕೆಲೋಲಿ ಗ್ರಾಮ ಸುಮಾರು 2 ಕಿಲೋ ಮೀಟರ್ ದೂರದಲ್ಲಿತ್ತು. ಅಲ್ಲಿ ಸಾಕಷ್ಟು ಜನ ವಸತಿ ಇತ್ತು ಎಂದರೆ ಸರಿ. ಚಾಸಾ 9 ರವರು ಪಂಚರನ್ನು ಕರೆತಂದಿರುತ್ತಾರೆ . ಆರೋಪಿಯನ್ನು 2 ಪ್ರಕರಣಗಳು ಆಗುವ ಮುಂಚೆ ನಾನು ನೋಡಿರುವುದಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಲು ಸಮಯದಲ್ಲಿ ವಾಹನದಲ್ಲಿ ಲ್ಯಾಪ್ ಟ್ಯಾಪ , ಪ್ರಿಂಟರ್ ಹಾಗೂ ತನಿಖೆಗೆ ಬೇಕಾಗುವ ವಸ್ತುಗಳನ್ನು ತೆಗೆದುಕೊಂಡು ಹೋಗಿರುತ್ತೇವೆ. ಕೆಲೋಲಿ ಗ್ರಾಮ ಅಣಶಿ ವನ್ಯ ಜೀವಿ ವಲಯದಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಗ್ರಾಮ ಕರ್ನಾಟಕ ಹಾಗೂ ಗೋವಾ ಗಡಿಯಲ್ಲಿ ಇರುತ್ತೆ ಎಂದರೆ ಸಾಕ್ಷಿಯು ಸುಮಾರು 9 ಕಿಲೋ ಮೀಟರ್ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಕೇಲೋಲಿ ಗ್ರಾಮದಲ್ಲಿ ಯಾವುದೇ ಕಚ್ಚಾ ರಸ್ತೆ ಇರುವುದಿಲ್ಲ ಎಂದರೆ, ಕುಂದಲ್ ಗ್ರಾಮದಿಂದ ಕೆಲೋಲಿ ಗ್ರಾಮಕ್ಕೆ ಕಚ್ಚಾ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಕುಂದಲ್ ಗ್ರಾಮದಿಂದ ಕೆಲೋಲಿ ಗ್ರಾಮಕ್ಕೆ ಹೋಗಲು ಒಂದು ಹಿನ್ನೀರಿನ ಮೂಲಕ ಹೋಗಬೇಕು ಎಂದರೆ ಸರಿಯಲ್ಲ. ಸಣ್ಣ ಜರಿಯನ್ನು ದಾಟಿ ಹೋಗಬೇಕಾಗುತ್ತದೆ ಎಂದು ನುಡಿಯುತ್ತಾರೆ. ಯಾವುದೇ ವಾಹನ ಕೆಲೋಲಿ ಗ್ರಾಮದ ವರಗೆ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ.

5. ಆರೋಪಿಯ ಚಿಕ್ಕಪ್ಪನ ಮನೆ ಯಿಂದ ಬೈಕನ್ನು ತೆಗೆದುಕೊಂಡು ಬಂದು ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೂ . ಮಾ 1 ನ್ನು ಪ್ರಕರಣಗೋಸ್ಕರ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯನ್ನು ಈ ಮೊದಲೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮುದ್ದೆ ಮಾಲಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು

ಯಾವುದೇ ಪಂಚನಾಮೆಯನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ವಾಹನವನ್ನು ಚಾಲಾಯಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.